
# ಜಾವೇದ್ ಕುಡಿತ ಬಿಟ್ಟಿದ್ದು...



ಅರ್ಬಾಜ್ ಖಾನ್ ಒಂದು ಸರಣಿ ನಡೆಸಿಕೊಡುತ್ತಿದ್ದಾರೆ. 'ದಿ ಇನ್‌ವಿಸಿಬಲ್ಸ್ ಸೀಸನ್ 2' ಎಂದು ಅದರ ಹೆಸರು. ಅವರು ನಟಿ ಶಬಾನಾ ಆಜ್ಮಿ ಅವರನ್ನು ಇತ್ತೀಚೆಗೆ ಮಾತನಾಡಿಸಿದರು. ಆ ಸರಣಿಯ ಒಂದು ಕಂತಿನಲ್ಲಿ ಶಬಾನಾ ತಮ್ಮ ಪತಿ, ಜಾವೇದ್ ಅಖ್ತರ್ ಮದ್ಯ ಕುಡಿಯುವುದನ್ನು ಬಿಟ್ಟ ಪ್ರಸಂಗವೊಂದನ್ನು ನೆನಪಿಸಿಕೊಂಡರು.

'ಅವರು ವಿಪರೀತ ಕುಡಿಯುತ್ತಿದ್ದರು. ಹೇಗಪ್ಪಾ ಬಿಡಿಸುವುದು ಎಂದು ಮನಸ್ಸಿನಲ್ಲೇ ಅಂದುಕೊಳ್ಳುತ್ತಿದ್ದೆ. ಲಂಡನ್‌ನಲ್ಲಿ ಇದ್ದಾಗ ಒಂದು ಬೆಳಿಗ್ಗೆ ಅವರು ಎದ್ದು ಬಂದವರೇ, ತಿಂಡಿ ಮಾಡು ಎಂದು ಕೇಳಿದರು. ಆಮೇಲೆ ಅವರಾಗಿಯೇ ಇನ್ನು ಮುಂದೆ ನಾನು ಕುಡಿಯುವುದಿಲ್ಲ ಎಂದುಬಿಟ್ಟರು. ನನಗೆ ತಕ್ಷಣವೇ ಗೊತ್ತಾಗಲಿಲ್ಲ. ಏನು ಹಾಗೆಂದರೆ ಎಂದು ವಿಚಾರಿಸಿದೆ. ಮದ್ಯ ಕುಡಿಯುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು. ಅದರಂತೆಯೇ ಅವರು ಆವತ್ತಿನಿಂದ ಕುಡಿಯುವುದನ್ನು ಬಿಟ್ಟೇಬಿಟ್ಟರು' ಎಂದು ಶಬಾನಾ ಬಿಚ್ಚಿಟ್ಟರು.

ದಶಕದ ಹಿಂದೆಯೇ ಜಾವೇದ್ ಅಖ್ತರ್ ತಮ್ಮ ಮದ್ಯವ್ಯಸನದ ಕುರಿತು ಸಾರ್ವಜನಿಕ ಪತ್ರವೊಂದನ್ನು ಬರೆದು, ಓದಿದ್ದರು.

ಹತ್ತೊಂಬತ್ತನೇ ವಯಸ್ಸಿನಲ್ಲಿಯೇ ಅವರು ಕುಡಿತ ಶುರುಮಾಡಿದ್ದರು. ಆ ಮೇ ಲಾ ಮೇ ಲೆ ಮುಂಬೈನಲ್ಲಿ ನೆಲೆಸಿದಾಗ ಸ್ನೇಹಿತರ ಜೊತೆ ಪಾರ್ಟಿ ಮಾಡುವುದು ಸಹಜ ಎನ್ನುವಂತಾಯಿತು. ಕ್ರಮೇಣ ದಿನಕ್ಕೆ ಒಂದು ಬಾಟಲ್ ಕುಡಿಯುವಷ್ಟು ಚಟಕ್ಕೆ ಬಿದ್ದರು. ಮೊದಲು ಹಣಕಾಸಿನ ಮುಗ್ಗಟ್ಟು ಇತ್ತು. ಆಮೇಲೆ ಕೆಲಸದಿಂದ ಒಳ್ಳೆಯ ಸಂಪಾದನೆಯಾದದ್ದೇ ಚಟಕ್ಕೇನೂ ಕೊರತೆಯಾಗಲಿಲ್ಲ.

ಹೀಗೆ ಜಾವೇದ್ ತಮ್ಮ ಮದ್ಯವ್ಯಸನದ ಅನುಭವವನ್ನು ತಾವೇ ಮುಕ್ತವಾಗಿ ಹೇಳಿಕೊಂಡಿದ್ದರು.



# 'ಪಿಡಿ' ಹಚ್ಚೆ... ಚರ್ಚೆಯ ಕಾವು

'ಪಿಡಿ' – ಕಳೆದ ಕೆಲವು ದಿನಗಳಿಂದ ಈ ಎರಡು ಇಂಗ್ಲಿಷ್ ಅಕ್ಷರಗಳು ಸಿನಿಮಾಮೋಹಿಗಳ ಬಾಯಿಗೆ ಆಹಾರವಾದವು. ಈ ಅಕ್ಷರಗಳು ಕಂಡಿದ್ದು ನಟಿ ದಿಶಾ ಪಟಾನಿ ಎಡಗೈನ ಮೇಲೆ; ಹಚ್ಚೆ ರೂಪದಲ್ಲಿ.

ಬಿಳಿ ಪ್ಯಾಂಟು, ನೀಲಿ ಟಾಪ್, ಆ ಟಾಪ್‌ನ ಮೇಲೆ ಚಿಟ್ಟೆ ಚಿತ್ರ, ಬಿಳಿ ಬ್ಯಾಗು ಇವೆಲ್ಲವನ್ನೂ ಧರಿಸಿ–ತೊಟ್ಟಿದ್ದ ದಿಶಾ ಫೋಟೊವನ್ನು ಕೆಲವರು ತೆಗೆದರು. ಅದು ಸಾಮಾಜಿಕ ಮಾಧ್ಯಮ, ಜಾಲತಾಣದಲ್ಲಿ ಹರಿದಾಡಿತು. ಹೊಗಳಲು, ಚರ್ಚಿಸಲು ಆಕೆಯ ದಿರಿಸಿನ ಸಾಕಷ್ಟು ಅಂಶಗಳೆಲ್ಲ ಇದ್ದರೂ ಬಹುತೇಕರ ಗಮನ ನೆಟ್ಟಿದ್ದು ಅವರ ಕೈಯ ಮೇಲಿನ ಹಚ್ಚೆ ಮೇಲೆ.

'ಡಿಪಿ' ಎಂದರೆ ಏನಿರಬಹುದು ಎಂಬ ಜಿಜ್ಞಾಸೆ. ಅಭಿಮಾನಿಯೊಬ್ಬ, 'ಪಿ ಫಾರ್ ಪ್ರಭಾಸ್, ಡಿ ಫಾರ್ ದಿಶಾ' ಎಂದು ಬರೆದು ಹೃದಯದ ಎಮೋಜಿ ಹಾಕಿ ಇನ್‌ಸ್ಟಾಗ್ರಾಂನಲ್ಲಿ ಪ್ರತಿಕ್ರಿಯಿಸಿದ. ಇದಕ್ಕೆ ಅನೇಕರು ಪ್ರತಿಕ್ರಿಯೆ ನೀಡುತ್ತಾ ಹೋದರು.

ಒಂದು ಕಡೆ, 'ಕಲ್ಕಿ 2898 ಎಡಿ' ಬಿಡುಗಡೆಯಾದ ನಾಲ್ಕು ದಿನಗಳಲ್ಲೇ ₹600 ಕೋಟಿ ಗಳಿಕೆಯತ್ತ ಮುನ್ನುಗ್ಗಿದ ಗೆಲುವಿನ ನಗು. ಯಾಕೆಂದರೆ, ಆ ಸಿನಿಮಾದಲ್ಲಿ ದಿಶಾ ಪ್ರಮುಖ ಪಾತ್ರಧಾರಿ. ಇನ್ನೊಂದು ಕಡೆ, ತಮ್ಮ ಹಚ್ಚೆ ಕುರಿತು ಅಭಿಮಾನಿಗಳಿಂದ ಬಿಸಿ ಬಿಸಿ ಚರ್ಚೆ. ದಿಶಾ ಪಟಾನಿ ಮೋಡದ ಮೇಲೆ ತೇಲುವುದೊಂದೇ ಬಾಕಿ. ಹ್ಞಾಂ, ಮೋಡ ಎನ್ನಲು ಕಾರಣವಿದೆ. ಅವರು ಇನ್‌ಸ್ಟಾಗ್ರಾಂ ಖಾತೆಯಲ್ಲಿ 'ಹ್ಯಾಷ್‌ಟ್ಯಾಗ್‌ಕ್ಲೌಡ್' ಎಂದು ಹಾಕಿಕೊಂಡರು. ಅಷ್ಟೇ ಅಲ್ಲ, 'ನನ್ನ ಹಚ್ಚೆಯ ಬಗೆಗೆ ಇಷ್ಟೊಂದು ಕುತೂಹಲ ಮೂಡಿರುವುದನ್ನು ಕಂಡು ಮೂಕವಿಸ್ಮಿತಳಾದೆ. ಖುಷಿ ಯಾವುದು ಎಂದು ಹುಡುಕಿ' ಎಂದೂ ಬರೆದರು. ಅವರು ತಮ್ಮ ಹಾಗೂ ಪ್ರಭಾಸ್ ನಡುವೆ ಪ್ರೇಮ ಪ್ರಸಂಗ ಇಲ್ಲವೆಂದೇನೂ ಹೇಳಲಿಲ್ಲ. ಇದೆ ಎಂದೂ ಸ್ಪಷ್ಟಪಡಿಸಲಿಲ್ಲ. ಅಡ್ಡಗೋಡೆ ಮೇಲೆ ದೀಪವಿಟ್ಟರು.

ಅಭಿಮಾನಿಗಳಿಗೆ ಇನ್ನೇನು ಬೇಕು, ದಿಶಾ ಹಚ್ಚೆ ಕುರಿತ ಚರ್ಚೆ ಈಗಲೂ ಮುಂದುವರಿದಿದೆ.

ಈ ಹಿಂದೆ ದಿಶಾ ಪಟಾನಿ ಹೆಸರು ನಟ ಟೈಗರ್ ಶ್ರಾಫ್ ಜೊತೆಗೆ ಕೇಳಿಬಂದಿತ್ತು.